ಇದುನ್ನ ಹಾಡದಿಕ್ಕೆ ನಿನಗೆ ಪಿಂಚಣಿ ಬೇರೆ ಕೊಡಬೇಕಾ?' ಎಂದು ಗದರಿ ನಿಲ್ಲಿಸುವಂತೆ ಹೇಳಿದರು. ಹನುಮಂತಣ್ಣ ಗಾಬರಿಯಿಂದ 'ಇಲ್ಲಾ ಸ್ವಾಮಿ ನಾನು ಅಮ್ಮನ ಹೊಗಳಿಕೆ ಪದಗಳನ್ನೂ ಹಾಡ್ತೀನಿ. ನನ್ನ ಹೊಟ್ಟೆ ಮೇಲೆ ಒಡೀಬೇಡಿ ಸ್ವಾಮಿ' ಎಂದು ಸೀದಾ ಅಲ್ಲಿದ್ದವರ ಕಾಲಿಗೇ ಬಿದ್ದುಬಿಟ್ಟ. ಅವನ ಗೋಳಾಟ ನೋಡಲಾರದೆ ಜಾನಪದ ಅಕಾಡಮಿ ಅಧ್ಯಕ್ಷರಾದ ಪಿಚ್ಚಳ್ಳಪ್ಪನವರು 'ನೋಡಿ ನಮ್ಮ ಕಲಾವಿದರಲ್ಲಿ ಇಂತದ್ದೆಲ್ಲಾ ಇರುತ್ತೆ. ಅಂದ ಮಾತ್ರಕ್ಕೆ ಅದನ್ನೆಲ್ಲ ಶ್ಲೀಲ ಅಶ್ಲೀಲ ಅಂತಾ ನೋಡಕ್ಕಾಗಲ್ಲ. ಹೋಗಲಿ ಒಂದೆರಡು ಹೊಗಳಿಕೆ ಪದ ಹಾಡು ಹನುಮಂತಣ್ಣ' ಎಂದು ಎಲ್ಲವನ್ನು ತಿಳಿಯಾಗಿಸಲು ನೋಡಿದರು. ಹನುಮಂತಣ್ಣ ಮತ್ತೆ ಹಲಗೆ ಸರಿಮಾಡಿಕೊಂಡು ತಮ ತಮ ಬಾರಿಸಿ

'ಹಸಿಬೇವಿನ ಕಡ್ಡಿ ರಸಬಿಟ್ಟು ತೆಯ್ದಾಗ ಅಸುಮಕ್ಕಳು ಕೆಂಡ ತುಳಿವಾಗ
ಅಸುಮಕ್ಕಳು ಕೆಂಡ ತುಳಿವಾಗ ಪಿಳೇಗಿನಮ್ಮ ಹುಸಿನಗೆ ನಗುತಾ ಬರುತಾಳೆ

ತೇರಿನ ಮುಂದಿನವಳೆ ಯಾರ್‍ಯಾರ ನೋಡಿದೆಯೆ ತೇರಿನ ಮುಂದಾಡೋ ಚೆಲುವಾರು
ತೇರಿನ ಮುಂದಾಡೋ ಚೆಲುವಾ ಈರಣ್ಣನ ತೋಳಿನ ಮೇಲಿಟ್ಟು ಹಸುದೇವು

'ಸಾಕು ಬಿಡು ಹನುಮಂತಣ್ಣ. ಇನ್ನು ಮೇಲೆ ಒಂದು ಕೆಲಸಾ ಮಾಡು. ಇನ್ನಷ್ಟು ಹೊಗಳಿಕೆ ಹಾಡುಗಳನ್ನೆ ಕಲಿತುಕೊಂಡು ಅಮ್ಮನ ಗುಡಿ ಮುಂದೆ ಹಾಡು. ಬೇರೆ ಏನೂ ಹಾಡಬೇಡ. ಹಂಗಾದ್ರೆ ಮಾತ್ರ ನಿನಗೆ ಪಿಂಚಣಿ ಕೊಡಬೌದು ಅಂತಾ ಸಿಫಾರ್ಸು ಮಾಡ್ತೀವಿ. ಆಗಬೌದಾ?' ಎಂದು ಪಿಚ್ಚಳ್ಳಪ್ಪನವರು ಹೇಳಿದಾಗ ಹನುಮಂತಣ್ಣನಿಗೆ ಏನೂ ತೋಚದೆ ಕತ್ತು ಕೆಳಗೆ ಹಾಕಿದ. ನೂರಾರು ಪದ ಹಾಡಿದರೂ ಎಂದು ದಣಿಯದ ಹನುಮಂತಣ್ಣನಿಗೆ ಇಂದು ಅಸಾಧ್ಯವಾದ ದಣಿವಾಗಿತ್ತು. ಹನುಮನಾಯಕನ ಜೊತೆಗೆ ಸಪ್ಪಗೆ ಊರಿಗೆ ಬಂದ ಹನುಮಂತಣ್ಣ ಮನೆಗೆ ಬಂದು ಹಲಗೆ ನೇತುಹಾಕಿ 'ಕುಡಿಯಾಕಿಷ್ಟು ನೀರು ತತಾರೆ' ಎಂದು ಹೆಂಡತಿಗೆ ಅಂದವನೆ ಗೋಡೆಗೆ ಒರಗಿ ಕೂತುಗಂಡ. ಗೋಡೆಯ ಇನ್ನೊಂದು ಗೂಟದಲ್ಲಿ ನೇತಾಡುತ್ತಿದ್ದ ಮಗನ ಪುಸ್ತಕದ ಚೀಲ ಅಣಕಿಸಿ ನಕ್ಕಂತೆ ಕೇಳಿಸಿತು. ಅಂತದ್ದೇ ನಗು ಎಲ್ಲ ಕಡೆಯಿಂದಲೂ ಕೇಳಿ ಬರುತ್ತಿತ್ತು. ಕಣ್ಣ ತುಂಬ ನೀರು ತುಂಬಿಕೊಂಡ ಗಂಡನಿಗೆ ಕೆಂಪಮ್ಮ ಚೆಂಬಿನ ತುಂಬ ನೀರು ಕೊಟ್ಟಳು. ಹೆಂಡತಿ ತಂದುಕೊಟ್ಟ ತಂಬಿಗೆ ನೀರನ್ನು ಒಮ್ಮೆಗೇ ಎತ್ತಿದಾಗ ಒಂದಷ್ಟು ಒಳಗೆ ಇನ್ನೊಂದಷ್ಟು ಹೊರಗೆ ಚೆಲ್ಲಿ ಹನುಮಂತಣ್ಣನ ಎದೆಯ ಮೇಲೆ ಇಳಿದು ಹೋದವು.

## ಎಸ್. ನಟರಾಜ ಬೂದಾಳು

ನಿವೃತ್ತ ಅಧ್ಯಾಪಕ ನಟರಾಜ ಬೂದಾಳು ಕನ್ನಡದ ಪ್ರಮುಖ ವಿಮರ್ಶಕರು, ಸಂಸ್ಕೃತಿ ಚಿಂತಕರು; ಕವಿ, ಕತೆಗಾರರೂ ಕೂಡ. 'ನಾಗಾರ್ಜುನನ ಮೂಲಮಾಧ್ಯಮಕಕಾರಿಕಾ', 'ನಾಗಾರ್ಜುನ – ಅಲ್ಲಮ', 'ಸರಹಪಾದ', 'ಪ್ರತ್ಯೇಕ ಬುದ್ಧ ಅಲ್ಲಮಪ್ರಭು', 'ಕನ್ನಡ ಕಾವ್ಯಮೀಮಾಂಸೆ' ಅವರ ಪ್ರಮುಖ ಸಂಶೋಧನೆಯ ಪುಸ್ತಕಗಳಾಗಿವೆ. 'ಕಪ್ಪುಹುಡುಗನ ಬೆಳಗು', 'ಸೂಜಿಗಲ್ಲು ಹುಡುಗಿ' ಅವರ ಕವನ ಸಂಗ್ರಹಗಳಾದರೆ, 'ಹಿಂದಣ ಹೆಜ್ಜೆಯನರಿತಲ್ಲದೆ' ಅವರ ವಿಮರ್ಶೆಯ ಪುಸ್ತಕವಾಗಿದೆ. ಬೂದಾಳು, ಪ್ರಸ್ತುತ ತುಮಕೂರಿನಲ್ಲಿ ನೆಲೆಸಿದ್ದಾರೆ.